**ಒ.ಎಸ್.ನಂಬ್ರ:79/2014 ಪಿ.ಡಬ್ಲ್ಯೂ : 1**

ದಿನಾಂಕ: 10-04-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

**ಪಾಟಿ ಸವಾಲು: ಶ್ರೀ ಎಂ.ಜೆ.ಎಸ್. ವಕೀಲರಿಂದ**

ನಿಪಿ-12 ರಿಂದ 19 ದಾಖಲೆಗಳನ್ನು ನಾನು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿಯನ್ನು ಸಲ್ಲಿಸಿ ಪಡೆದಿರುತ್ತೇನೆ . ನಿಪಿ-12 ರಿಂದ 19 ದಾಖಲೆಗಳ ದೃಡೀಕೃತ ನಕಲನ್ನು ಹಾಜರುಪಡಿಸಲು ತೊಂದರೆ ಇದೆಯ ಎಂದರೆ ಸಾಕ್ಷಿಯು ಅಗತ್ಯವಿದ್ದರೆ ದೃಢೀಕೃತ ನಕಲನ್ನು ಹಾಜರುಪಡಿಸುತ್ತೇನೆ ಎಂದು ನುಡಿದಿರುತ್ತಾರೆ. ನಿಪಿ-12 ದಾಖಲೆಯು ನಾನು ಸಿ ಆರ್ ಪಿ ಎಫ್ ಪೊಲೀಸ್ ಪ್ಯಾರಾ ಮಿಲಿಟರಿಯಲ್ಲಿ ಸೇವೆ ಸಲ್ಲಿಸುತಿದ್ದೆ ಎನ್ನುವ ಆಧಾರಕ್ಕಾಗಿ ಹಾಜರುಪಡಿಸಿರುತ್ತೇನೆ. ನಿಪಿ-12 ದಾಖಲೆಯನ್ನು ಯಾವ ಆಧಾರದ ಮೇಲೆ ಅಧಿಕಾರಿಗಳು ನೀಡಿದ್ದಾರೆ ಎಂದು ನನಗೆ ಹೇಳಲು ಸಾಧ್ಯವಿಲ್ಲ. ನಿಪಿ-12 ದಾಖಲೆಗೂ ಈ ದಾವೆಗೂ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಸಂಬಂಧ ಇದೆ ಎಂದು ನುಡಿದಿರುತ್ತಾರೆ . ದಿ:26-07-2018 ರಂದು ಪಾಟೀ ಸವಾಲಿನಲ್ಲಿ ನನಗೆ ಕೇಳಿದ ಪ್ರಶ್ನೆಗಳಿಗೆ ನಿಪಿ-12 ಯಾವುದೇ ಸಮರ್ಪಕ ಮಾಹಿತಿಯನ್ನು ನೀಡುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಇಲಾಖೆಯವರಿಗೆ ತಪ್ಪು ಮಾಹಿತಿ ನೀಡಿ ನಿಪಿ-12 ದಾಖಲೆಯನ್ನು ಈ ದಾವೆಗಾಗಿ ಪಡೆದಿದ್ದೇನೆಂದರೆ ಸರಿಯಲ್ಲ. ನಿಪಿ-12 ನಾನು ಸೇವೆ ಸಲ್ಲಿಸುತಿದ್ದ ಇಲಾಖೆಯವರು ನೀಡಿದ ದಾಖಲೆ ಅಲ್ಲ ಎಂದರೆ ಸರಿ .

ನಿಪಿ-13 ರಲ್ಲಿ ಹೇಳಿದ ವಕೀಲರ ನೋಟೀಸನ್ನು 1 ನೇ ಪ್ರತಿವಾದಿ ಗ್ರಾಮ ಪಂಚಾಯತಿನವರಿಗೆ ಕಳುಹಿಸಿದ ಬಗ್ಗೆ ಅಂಚೆ ಸ್ವೀಕೃತಿ ನಮ್ಮ ವಕೀಲರ ಬಳಿ ಇರದ ಕಾರಣ ನಿಪಿ-13 ನ್ನು ಮಾಹಿತಿ ಹಕ್ಕಿನಡಿಯಲ್ಲಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಗ್ರಾಮಪಂಚಾಯತಿನವರು ಆ ಪತ್ರಕ್ಕೆ ನೀಡಿದ ಪ್ರತ್ಯುತ್ತರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಪಿ-13 ನ್ನು ಅನಗತ್ಯವಾಗಿ ಪಡೆದು ಈ ದಾವೆಯಲ್ಲಿ ಹಾಜರುಮಾಡಿದ್ದೇನೆಂದರೆ ಸರಿಯಲ್ಲ. ನಿಪಿ-14 ದಾಖಲೆ ಸಹಾ ನ್ಯಾಯವಾದ ದಾಖಲೆ ಅಲ್ಲ ಎಂದರೆ ಸರಿಯಲ್ಲ. ನಿಪಿ-15 ನ್ನು ತಪ್ಪು ಮಾಹಿತಿ ನೀಡಿ ಪಡೆದಿದ್ದೇನೆ ಎಂದು 1 ನೇ ಪ್ರತಿವಾದಿ ಗ್ರಾಮಪಂಚಾಯತಿನವರು ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-16 ದಾಖಲೆಯಂತೆ ಆದೇಶವನ್ನು ಮಾಡುವ ಮೊದಲು ನನ್ನ ವಿಚಾರಣೆ ಆಗಿದೆಯೇ ಎಂದರೆ ಸಾಕ್ಷಿಯು ನನ್ನನ್ನು ಈ ಪ್ರಕರಣದ ಬಗ್ಗೆ ಅಧಿಕಾರಿಗಳು ವಿಚಾರಿಸಿಕೊಂಡಿದ್ದಾರೆ ಎಂದು ನುಡಿದಿರುತ್ತಾರೆ. ನಿಪಿ-16 ತಾಲೂಕು ಪಂಚಾಯತ್ ಅಧಿಕಾರಿಗಳು ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಬರೆದ ಪತ್ರ ಎಂದರೆ ಸರಿ . ಈ ಪತ್ರದ ಮೇಲೆ ಯಾವುದಾದರೂ ಆದೇಶ ಆಗಿದೆಯಾ ಎಂದರೆ ಸಾಕ್ಷಿಯು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ನಿಪಿ-16 ರ ಕುರಿತು ಸಂಬಂಧಪಟ್ಟ ಅಧಿಕಾರಿಗಳು ವಿಚಾರಣೆ ಮಾಡಿದ್ದರೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಆ ದಾಖಲೆಯಲ್ಲಿ ನಮೂದಿಸಿರುವ ಅಭಿಪ್ರಾಯವನ್ನು ಯಾವ ಆಧಾರದ ಮೇಲೆ ವ್ಯಕ್ತಪಡಿಸಿದ್ದಾರೆ ಎಂದರೆ ಸಾಕ್ಷಿಯು ನಾನು ನೀಡಿದ ಅರ್ಜಿಯ ಮೇಲೆ ನೀಡಿರುತ್ತಾರೆ. ನಿಪಿ-16 ದಾಖಲೆಯನ್ನು ಸ್ವಾಭಾವಿಕ ನ್ಯಾಯಕ್ಕೆ ವಿರುದ್ಧವಾಗಿ, ಸದ್ರಿ ಅಧಿಕಾರಿಯೊಂದಿಗೆ ಶಾಮೀಲಾಗಿ ಸೃಷ್ಟಿಸಿಕೊಂಡಿರುವ ದಾಖಲೆ ಎಂದರೆ ಸರಿಯಲ್ಲ. ನಿಪಿ-17 ಮತ್ತು 18 ದಾಖಲೆಗಳು ನ್ಯಾಯವಾದ ದಾಖಲೆಗಳಲ್ಲ ಈ ದಾವೆಗಾಗಿ ಸೃಷ್ಟಿಸಿಕೊಂಡ ದಾಖಲೆಗಳು ಎಂದರೆ ಸರಿಯಲ್ಲ. ನಿಪಿ-18 ದಾಖಲೆಯಂತೆ

ಪಂಚಾಯತ್ ಕಾರ್ಯದರ್ಶಿಯವರು ನನ್ನ ವಿರುದ್ಧ ಪಂಚಾಯತ್ ಸ್ವಾಧೀನವಿರುವ ಸ್ಥಳದಲ್ಲಿ ನಾನು ಅಕ್ರಮ ಚಟುವಟಿಕೆಯಲ್ಲಿ ತೊಡಗಿರುತ್ತೇನೆ ಎಂದು ನನ್ನ ವಿರುದ್ದ ಪೊಲೀಸು ದೂರು ನೀಡಿದ್ದಾರೆ ಎಂದರೆ ಸರಿ. ಪಂಚಾಯತಿಯವರು ಸದರಿ ದೂರಿನಲ್ಲಿ ನಾನು ಅವರಿಗೆ ಸೇರಿದ ಸ್ಥಳದಲ್ಲಿ ಅಕ್ರಮ ಚಟುವಟಿಕೆಯಲ್ಲಿ ತೊಡಗಿದ್ದೇನೆ ಎಂದು ಆಪಾದನೆ ಮಾಡಿದ್ದಾರೆ ಎಂದರೆ ಸಾಕ್ಷಿಯು ಆಪಾದನೆ ಮಾಡಿರುತ್ತಾರೆ ಆದರೆ ಅದು ಸರಿಯಲ್ಲ ಎಂದು ನುಡಿದಿರುತ್ತಾರೆ. ಸದರಿ ಜಾಗದಲ್ಲಿ ನಾನು ಮಣ್ಣು ತುಂಬುವ ಕೆಲಸವನ್ನು ಮಾಡಿಸುತಿದ್ದೆ. ಸಾಕ್ಷಿಯು ಮುಂದುವರಿದು ಸದರಿ ಜಾಗವು ನನ್ನ ಹೆಸರಿನಲ್ಲಿ ಇದ್ದಿದ್ದರಿಂದ ನಾನು ಆ ಜಾಗದಲ್ಲಿ ಕೆಲಸವನ್ನು ಮಾಡಿಸುತಿದ್ದೆ. ಆ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡಲು ನಾನು ಗ್ರಾಮಪಂಚಾಯತಿಯಿಂದ ಪರವಾನಿಗೆಯನ್ನು ಪಡೆದಿರುತ್ತೇನೆ. ನಿಪಿ-18 ರಲ್ಲಿ ಗಾಮಪಂಚಾಯತಿಯವರು ಪಂಚಾಯತಿಯಿಂದ ಪರವಾನಿಗೆ ಪಡೆಯದೆ ಅಕ್ರಮ ಚಟುವಟಿಕೆಯನ್ನು ಮಾಡುತಿದ್ದೇನೆ ಎಂದು ಆಪಾದನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸದರಿ ದಾಖಲೆಯಲ್ಲಿ ಪೊಲೀಸರು ಹಿಂಬರಹವನ್ನು ನೀಡಿರುತ್ತಾರೆ ಎಂದು ನುಡಿದಿರುತ್ತಾರೆ. ಪೊಲೀಸರು ಸದರಿ ಪ್ರಕರಣವನ್ನು ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಸರಿ . ನಿಪಿ-19 ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಮತ್ತು ಅವರ ಮೇಲೆ ನನ್ನ ಹತೋಟಿಯನ್ನು ದುರುಪಯೋಗಪಡಿಸಿಕೊಂಡು ಸದರಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪಂಚಾಯತ್ ರಾಜ್ ಕಾಯ್ದೆ ಮತ್ತು ನಿಯಮವನ್ನು ನಾನು ಉಲ್ಲಂಘಿ ಸಿ ಅಕ್ರಮ ಚಟುವಟಿಕೆಯನ್ನು ನಡೆಸಿ ಅದನ್ನು ಪ್ರಶ್ನಿಸಿದ ಅಧಿಕಾಅರಿಗಳ ಮೇಲೆ ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-20 ಮತ್ತು 21 ನನ್ನ ಮಾಹಿತಿಯ ಮೇರೆಗೆ ಖಾಸಗಿ ಅಭಿಯಂತರರು ಮಾಡಿಕೊಟ್ಟ ದಾಖಲೆಯಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ಕೂಡಾ ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡದ್ದು ಎಂದರೆ ಸರಿಯಲ್ಲ. ಸುಳ್ಳು ಪ್ರಕರಣವನ್ನು ದಾಖಲಿಸಿ ಅದನ್ನು ಮುಂದುವರಿಸಿಕೊಂಡು ಹೋಗಲು ಅನಗತ್ಯ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸುತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-12 ರಿಂದ 21 ದಾಖಲೆಗಳು ನ್ಯಾಯಬದ್ಧ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಗುರುತಿಸಲು ನನಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**